*

**ಓಎಸ್ ನಂಃ 3/2021**

**ಪಿಡಬ್ಲೂಃ 2**

**ಸಾಕ್ಷಿಗೆ ದಿನಾಂಕ 13-02-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ. ಎಮ್.ವಿ.ಎಲ್. ವಕೀಲರಿಂದ

ನಿಮ್ಮ ತಂದೆ ಮಹಾದೇವಪ್ಪ ಇಂದು ನ್ಯಾಯಾಲಯಕ್ಕೆ ಬಂದಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವರಿಗೆ ಅನಾರೋಗ್ಯ ಇದ್ದು ಅವರಿಗೆ ಕಿವಿ ಕಡಿಮೆ ಕೇಳುತ್ತದೆ ಮತ್ತು Blood Pressure ತೊಂದರೆ ಇದೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ಬಿಟ್ಟು ನಿಮ್ಮ ತಂದೆ ಸಲ್ಲಿಸಿದ ಬೇರೆ ದಾವೆಗಳ ಕುರಿತು ನಿಮಗೆ ಸಂಪೂರ್ಣ ಮಾಹಿತಿ ಇದೆಯಾ ಎಂದರೆ ಸಾಕ್ಷಿ ಸಂಪೂರ್ಣ ಮಾಹಿತಿ ಇಲ್ಲ ಆದರೆ ಮನೆಯಲ್ಲಿ ಮಾತನಾಡುತ್ತಿದ್ದ ವಿಷಯಗಳ ಬಗ್ಗೆ ಮಾಹಿತಿ ಇದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ಮೂಲ ದಾವೆ ಸಂಖ್ಯೆ 5/2013 ರ ವಾದ ಪತ್ರವನ್ನು ತೋರಿಸಿ, ಸದರಿ ದಾವೆಯನ್ನು ನಿಮ್ಮ ತಂದೆ ಹಿರಿಯ ಸಿವಿಲ್ ನ್ಯಾಯಾಲಯ ಚಿತ್ತಾಪುರದಲ್ಲಿ Partition and seperate possession and correction of RORನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ ವಾದ ಪತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ಈಗ ಈ ದಾವೆಯನ್ನು ನಿಮ್ಮ ತಂದೆ ಸರ್ವೆ ನಂಬರ್ 558/1ರಲ್ಲಿ 4 ಎಕ್ರೆ ಕುರಿತು ಸಲ್ಲಿಸಿದ್ದಾರೆ ಎಂದರೆ ಸರಿ. ನಿಡಿ-1ರಲ್ಲಿ ಫ್ಯಾರಾ-2ರ ಆಸ್ತಿಗಳ ಬಗ್ಗೆ ವಿವರಣೆ ಇರುವ J ಆಸ್ತಿಯು ಈ ದಾವೆಯ ದಾವಾ ಆಸ್ತಿ ಆಗಿರುತ್ತದೆ ಎಂದರೆ ಸರಿ. ಸದರಿ ಮೂಲ ದಾವೆ ಸಂಖ್ಯೆ 5/2013 ದಿನಾಂಕ 10.06.2021ರಂದು ನಿಕಾಲಿಯಾಗಿ ಈ ದಾವಾ ಆಸ್ತಿಯ ಕುರಿತು ನಿಮ್ಮ ತಂದೆ ಕೇಳಿದ ಪರಿಹಾರವನ್ನು ತಳ್ಳಿ ಹಾಕಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ದಾವಾ ಆಸ್ತಿಯ ಕಬ್ಜೆ ನಮ್ಮ ಬಳಿ ಇದೆ ಎಂದು ನುಡಿಯತ್ತಾರೆ. ಈ ದಾವೆಯ ಪ್ರತಿವಾದಿ ಮೂಲ ದಾವೆ ಸಂಖ್ಯೆ 5/2013ರಲ್ಲಿ 7ನೇ ಪ್ರತಿವಾದಿ ಆಗಿದ್ದ ಎಂದರೆ ಸರಿ. ಸದರಿ ದಾವೆಯನ್ನು ನಿಕಾಲಿ ಮಾಡುವಾಗ ಮಾನ್ಯ ನ್ಯಾಯಾಲಯವು ಈ ದಾವೆಯ ದಾವಾ ಆಸ್ತಿಯು ಈ ಪ್ರತಿವಾದಿಯ ಸ್ವಂತ ಆಸ್ತಿ ಎಂದು ಹಿಡಿದು ದಾವೆಯನ್ನು ಆ ಆಸ್ತಿಯ ಕುರಿತು ತಿರಸ್ಕಾರ ಮಾಡಲಾಗಿದೆ ಎಂದರೆ ಸರಿ. ಸಾಕ್ಷಿಗೆ ಈಗ ಮೂಲ ದಾವೆ ಸಂಖ್ಯೆ 5/2013ರ ಆದೇಶ ಮತ್ತು Decree ಯ ಪ್ರತಿಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ ಕಾರಣ ಸದರಿ

Judgment ನ್ನು ನಿಡಿ-2 ಎಂದು ಮತ್ತು Decree ಯ ಪ್ರತಿಯನ್ನು  ನಿಡಿ-3 ಎಂದು ಗುರುತಿಸಲಾಯಿತು.

ದಿಃ 19.06.1986ರಂದು ದಾವಾ ಆಸ್ತಿಯ ಮೂಲ ಮಾಲಿಕರಾದ ದುರ್ಗವ್ವ ನಿಂಗಪ್ಪ ಧನಗಾರ್ ಇವರು ದಾಖಲೆ ಸಂಖ್ಯೆ 564/1986-87ರಂತೆ ದಾವಾ ಆಸ್ತಿಯನ್ನು ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಪ್ರತಿವಾದಿ ಒಟ್ಟು ಕುಟುಂಬದ ಹಣದಿಂದ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂದು ನುಡಿಯುತ್ತಾರೆ.  ನೀವು ಹೇಳುವಂತೆ ಪ್ರತಿವಾದಿ ಒಟ್ಟು ಕುಟುಂಬದ ಹಣದಿಂದ ದಾವಾ ಆಸ್ತಿಯನ್ನು ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಯ ತಂದೆ ದಾವಾ ಆಸ್ತಿಯನ್ನು ಖರೀದಿ ಮಾಡಲು ಪ್ರತಿವಾದಿಗೆ ರೂ.20,000/- ನೀಡಿದ್ದಾರೆ ಎಂದು ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.  1986ರಿಂದ ದಾವಾ ಆಸ್ತಿಯು ವಾದಿಯ ತಂದೆಯ ಕಬ್ಜಾದಲ್ಲಿತ್ತು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿ 1999-2000 ಇಸವಿಯಲ್ಲಿ ನಿಮ್ಮ ತಂದೆಯ ಹೆಸರಿಗೆ ರೂ.20/- ಬಾಂಡ್ ಪೇಪರ್ ಬರೆದುಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ನಿಮ್ಮ ತಂದೆ 2016ರಲ್ಲಿ ಅನಧಿಕೃತವಾಗಿ ಅವರ ಹೆಸರನ್ನು ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ಏರಿಸಿಕೊಂಡ ಕಾರಣ ಪ್ರತಿವಾದಿಯು AC ಸೇಡಂ ಇವರ ನ್ಯಾಯಾಲಯದಲ್ಲಿ REV/56/2012-13 ನೇದ್ದನ್ನು ಸಲ್ಲಿಸಿದ್ದು ಅದರ ಪ್ರಕಾರ ನಿಮ್ಮ ತಂದೆ ಮಾಡಿಕೊಂಡ mutation ಆದೇಶವನ್ನು ರದ್ದು ಮಾಡಲಾಗಿತ್ತು ಎಂದರೆ ಸರಿ.  ಸದರಿ ಆದೇಶದ ವಿರುದ್ಧ ನಿಮ್ಮ ತಂದೆ ಸಲ್ಲಿಸಿದ ಮೇಲ್ಮನವಿಯನ್ನು DC ಕಲಬುರಗಿಯವರು ದಿಃ 14.11.2016ರ ಆದೇಶದಂತೆ ವಜಾಗೊಳಿಸಿರುತ್ತಾರೆ ಎಂದರೆ ಸರಿ.  ಸದರಿ  DC ಆದೇಶದ ವಿರುದ್ಧ ನಿಮ್ಮ ತಂದೆ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ WP No. 206382-83/2016ನ್ನು ಸಲ್ಲಿಸಿದ್ದು ಅದೂ ಸಹ ದಿಃ05.08.2019ರ ಆದೇಶದ ಪ್ರಕಾರ ವಜಾಗೊಳಿಸಲಾಗಿದೆ ಎಂದರೆ ಸರಿ.  ಮಾನ್ಯ ಉಚ್ಛ ನ್ಯಾಯಾಲಯವು ಸದರಿ WP No. 206382-83/2016ನ್ನು  ವಜಾ ಮಾಡುವಾಗ ನಿಮ್ಮ ತಂದೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಮ್ಮ ಹಕ್ಕುಗಳನ್ನು ಸಾಬೀತುಪಡಿಸಲು ನಿರ್ದೇಶನ ನೀಡಿತ್ತು ಎಂದರೆ ಸರಿ.  ಮೂಲ ದಾವೆ ಸಂಖ್ಯೆ 5/2013ರ ಆದೇಶ ಆದ ನಂತರ ವಾದಿಗೆ ಈ ದಾವೆಯನ್ನು ಸಲ್ಲಿಸುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಕಬ್ಜೆ ಎಂದಿಗೂ ನಿಮ್ಮ ಅಜ್ಜ ಅಥವಾ ವಾದಿಯ ಬಳಿ ಇರಲಿಲ್ಲ ಮತ್ತು ಈಗಲೂ ಸಹ ನಿಮ್ಮ ಕಬ್ಜ ಇಲ್ಲ ಎಂದರೆ ಸರಿಯಲ್ಲ. ನೀವು ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮಾಲಿಕತ್ವ ಮತ್ತು ಕಬ್ಜೆ ಪ್ರತಿವಾದಿಗೆ ಸೇರಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.